<u>ದಿನಾಂಕಃ 10-09-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ವಿ.ಎಸ್.ಕೆ. ವಕೀಲರಿಂದಃ</u>

ನನಗೆ **2** ಜನ ಗಂಡು ಮಕ್ಕಳು. ನಾನು ನನ್ನ ಮಕ್ಕಳು ಹಾಗೂ ನನ್ನ ಅತ್ತೆ-ಮಾವ ಕೂಡಿಯೇ ವಾಸವಾಗಿದ್ದೆವೆ. ನಾನು ಕೂಲಿ ಕೆಲಸ ಮಾಡುತ್ತೇನೆ. ನನ್ನ ಮಾವ ಸಹ ಕೂಲಿ ಕೆಲಸ ಮಾಡುತ್ತಾರೆ. ನನಗೆ ಹಾಗೂ ನನ್ನ ಮಾವನಿಗೆ ದಿನಕ್ಕೆ ತಲಾ ರೂ.**250/-** ಕೂಲಿ ಬರುತ್ತದೆ. ಸದರಿ ಕೂಲಿಯ ಮೇಲೆ ನಾವು ಜೀವನ ಸಾಗಿಸುತ್ತೇವೆ ಎಂದರೆ ಸರಿ.

**2.** ನನ್ನ ಗಂಡ ಅಪಘಾತಕ್ಕೆ ಒಳಗಾದಾಗ ಆತನಿಗೆ **36-37** ವಯಸ್ಸು ಇತ್ತು ಎಂದರೆ ಸರಿ. ನನ್ನ ಗಂಡ ಹೊಲ್ ಸೆಲ್ ವ್ಯಾಪಾರ ಮಾಡುತಿ**2**ದ್ದರು ಎಂದು ತೋರಿಸುವ ದಾಖಲೆಗಳನ್ನು ನಾನುಹಾಜರು ಪಡಿಸಿಲ್ಲ ಎಂದರೆ ಸರಿ. ನನ್ನ ಗಂಡ ಯಾವುದೇ ಹೋಲ್ ಸೆಲ್ ವ್ಯಾಪಾರ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿದ ನಿಪಿ-**3** ಶವಪಂಚನಾಮೆಯಲ್ಲಿ ನನ್ನ ಗಂಡನ ವೃತ್ತಿ ಕೂಲಿ ಎಂದು ನಮೂದಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡ ಸಹ ನಮ್ಮಂತೆ ಕೂಲಿ ಕೆಲಸ ಮಾಡಿ ದಿನಕ್ಕೆ ರೂ.**250/-** ಸಂಪಾದಿಸುತ್ತಿದ್ದರುೂ ಸಹ ಆತ ವ್ಯಾಪಾರ ಮಾಡಿ ತಿಂಗಳಿಗೆ ರೂ.**50,000/-** ಸಂಪಾದಿಸುತ್ತಿದ್ದರು ಎಂದು ಸುಳ್ಳು ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಗಂಡ ಸಹ ಕೂಲಿ ಮಾಡಿ ದಿನಕ್ಕೆ ರೂ. **250/-** ಸಂಪಾದಿಸುತ್ತಿದ್ದರು ಎಂದರೆ ಸರಿಯಲ್ಲ.

**3.** ನಾವು ನನ್ನ ಗಂಡನ ಆದಾಯದ ಮೇಲೆ ಅವಂಬಿತರಾಗಿದ್ದೆವು ಎಂದು ಸುಳ್ಳು ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಿನ ನನ್ನ ಗಂಡ ಮೋಟಾರ್ ಸೈಕಲ್ ಚಾಲನೆ ಮಾಡುತ್ತಿದ್ದರು ಎಂದರೆ ಸರಿ. ಸದರಿ ನನ್ನ ಗಂಡನ ಮೋಟಾರ್ ಸೈಕಲ್ ನ ಎದುರಿಗೆ ಬರುತ್ತಿದ್ದ ಮೋಟಾರ್ ಸೈಕಲಿಗೂ ಹಾಗೂ ನನ್ನ ಗಂಡನ

ಮೋಟಾರ್ ಸೈಕಲ್ ಗೂ ಎದುರು ಬದುರು ಅಪಘಾತವಾಗಿರುತ್ತದೆ ಎಂದರೆ ಸರಿ. ನನ್ನ ಗಂಡನಿಗೆ ಮೋಟಾರ್ ಸೈಕಲ್ ಚಾಲನೆ ಮಾಡುವ ಚಾಲನಾ ಪರವಾನಿಗೆ ಪತ್ರ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತ ನನ್ನ ಗಂಡನ ತಪ್ಪಿನಿಂದಲೂ ಸಹ ಆಗಿದೆ ಎಂದು ಪೋಲಿಸರು ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಅದೇರೀತಿ ಸದರಿ ನನ್ನ ಗಂಡ ಚಾಲನಾ ಪರವಾನಿಗೆ ಪತ್ರ ಇಲ್ಲದೇ ಮೋಟಾರ್ ಸೈಕಲ್ ಚಾಲನೆ ಮಾಡಿರುತ್ತಾರೆ ಎಂದು ಪೋಲಿಸರು ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಪಘಾತ ಸಂಪೂರ್ಣವಾಗಿ ನನ್ನ ಗಂಡನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಸದರಿ ಅಪಘಾತ ಸದರಿ ಎದುರುಗಡೆ ಬರುತ್ತಿದ್ದ ಮೋಟಾರ್ ಸೈಕಲ್ ಸವಾರನ ತಪ್ಪಿನಿಂದ ಆಗಿದೆ ಎಂದು ಸುಳ್ಳು ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಎದುರುಗಡೆ ಬರುತ್ತಿದ್ದ ಮೋಟಾರ್ ಸೈಕಲ್ ಸವಾರನಿಗೂ ಸಹ ಚಾಲನಾ ಪರವಾನಿಗೆ ಪತ್ರ ಇರಲಿಲ್ಲ ಹಾಗೂ ಆತನ ತಪ್ಪಿನಿಂದಲೂ ಸಹ ಅಪಘಾತವಾಗಿದ್ದರಿಂದ **2** ನೇ ಎದುರುದಾರರು ನನಗೆ ಪರಿಹಾರ ನೀಡಲು ಬಾಧ್ಯಸ್ತರು ಅಲ್ಲ ಎಂದರೆ ಸರಿಯಲ್ಲ.

**4.** ನನ್ನಗಂಡ ಅಪಘಾತವಾಗಿ **12** ದಿನಗಳ ನಂತರ ಚಿಕಿತ್ಸೆ ಪಡೆಯುತ್ತಿದ್ದ ಕಾಲಕ್ಕೆ ಆಸ್ಪತ್ರೆಯಲ್ಲಿ ತೀರಿಕೊಂಡಿರುತ್ತಾರೆ. ನನ್ನಗಂಡ ಸದರಿ ಅಪಘಾತದಲ್ಲಿ ಗಾಯಗೊಂಡ ಹಿನ್ನೆಲೆಯಲ್ಲಿ ತೀರಿಕೊಂಡಿಲ್ಲ ಎಂದರೆ ಸರಿಯಲ್ಲ. ಆದರೂ ಸಹ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದಾಖಲೆ ಹಾಜರು ಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

Sd/-
ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.